ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮಂತ್ರಿ ನೀರಾವರಿ ಮಂತ್ರಿಗಳು).—

ಅ) ಬಂದಿದೆ.

ಆ) ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ

ಶ್ರೀ ಹೆಚ್.ಡಿ. ದೇವೇಗೌಡ.—೭೦೦ ಎಕರೆ ಭೂಮಿಗೆ ನೀರು ಬೇಕೆಂದು ಕೇಳುತ್ತಿದ್ದಾರೆ. ಆದರೆ ಇದು ಕಮ್ಯಾಂಡ್ ಏರಿಯಾದಲ್ಲಿ ಸೇರಿಲ್ಲ. ಈಗ ಇರುವ ಕಮ್ಯಾಂಡ್ ಏರಿಯಾದಲ್ಲಿ ಏನು ಪ್ರೆಷರ್ ಇದೆಯೋ ಅದಕ್ಕೆ ಪೂರ್ಣ ನೀರನ್ನು ಒದಗಿಸಬೇಕಾಗಿದೆ. ಆದ್ದರಿಂದ ಈ ಬಗ್ಗೆ ಸರ್ಕಾರ ಪರಿಶೀಲಿಸುತ್ತಿದೆ.

ಶ್ರೀ ಯು. ಭೂಪತಿ.—ಈಗಾಗಲೇ ನಾನು ಕೇಳಿರತಕ್ಕಂತಹ ೭೦೦ ಎಕರೆ ಜಮೀನಿಗೆ ಏನಿದೆ, ಅದಕ್ಕೆ ಪಕ್ಕದಲ್ಲಿ ಷೀಪ್ ಅಂಡ್ ಕ್ಯಾಟಲ್ ಫಾರಂ ಇದೆ. ಅದಕ್ಕೆ ಈಗಾಗಲೇ ೮ ಕ್ಯೂಸೆಕ್ಸ್ ನೀರನ್ನು ಕೊಟ್ಟಿದ್ದಾರೆ. ಆದರೆ, ಅವರು ಈಗ ಕೇವಲ ೬-೭ ಕ್ಯೂಸೆಕ್ಸ್ ನೀರನ್ನು ಉಪಯೋಗ ಮಾಡಿಕೊಳ್ಳುತ್ತಿದ್ದಾರೆ. ೨ ಕ್ಯೂಸೆಕ್ಸ್ ನೀರು ವ್ಯರ್ಥವಾಗುತ್ತಿದೆ. ಅಲ್ಲಿ ಒಂದು ದೊಡ್ಡ ಹಳ್ಳ ಬರುತ್ತದೆ. ಅದರಲ್ಲಿ ಒಂದು ಬ್ಯಾರೇಜ್ ಕಟ್ಟಿದರೆ, ಬಹಳ ಅನುಕೂಲವಾಗುತ್ತದೆ. ಇದರ ಬಗ್ಗೆ ರೈತರು ಬಹಳ ವರ್ಷಗಳಿಂದ ಹೋರಾಡುತ್ತಿದ್ದಾರೆ. ಇದು ಯಾವ ಹಂತದಲ್ಲಿದೆ ಎಂಬ ಬಗ್ಗೆ ಮತ್ತು ಯಾವ ರೀತಿ ಮಾಡುತ್ತೀರಿ ಎಂಬುದರ ಬಗ್ಗೆ ಸ್ಪಷ್ಟವಾಗಿ ಹೇಳಬೇಕು.

ಶ್ರೀ ಹೆಚ್.ಡಿ. ದೇವೇಗೌಡ.—ಮಾನ ಅಧ್ಯಕ್ಷರೆ, ಕಮ್ಯಾಂಡ್ ಏರಿಯಾದಲ್ಲಿ ಸೇರಿಸಿಲ್ಲವೆಂದು ಹೇಳುತ್ತಾರೆ. ಈಗ ಅಡಿಷನಲ್ಲಾಗಿ ಸೇರಿಸಬೇಕೆಂದು ಹೇಳುತ್ತಿದ್ದಾರೆ. ಅವರು ಹೇಳಿದ ವಿಷಯವನ್ನು ಪರಿಶೀಲನೆ ಮಾಡಬೇಕಾಗುತ್ತದೆ. ಅವರು ಏನೇನು ಹೊಸ ವಿಷಯಗಳನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ, ಅವುಗಳನ್ನು ಸರ್ಕಾರ ಪರಿಶೀಲನೆ ಮಾಡುತ್ತದೆ. ಏನಾದರೂ ಸಹಾಯ ಮಾಡಲು ಸಾಧ್ಯತೆ ಇದೆಯೇ ಎಂಬ ಬಗ್ಗೆ ಆಲೋಚನೆ ಮಾಡಬೇಕಾಗುತ್ತದೆ.

ಶ್ರೀ ಯು. ಭೂಪತಿ.—ತಮಗೆ ಏನೇನು ಮಾಹಿತಿ ಬಂದಿದೆ ಎಂಬ ಬಗ್ಗೆ ತಿಳಿಸಬೇಕು.

ಶ್ರೀ ಹೆಚ್.ಡಿ. ದೇವೇಗೌಡ.—ಈಗ ಇರತಕ್ಕ ವ್ಯವಸ್ಥೆಯಲ್ಲಿ ಕಾಂಟೆಂಪ್ಲೇಟೆಡ್ ಅಚ್ಚುಕಟ್ಟಿಗೆ ಪೂರ್ಣವಾಗಿ ನೀರು ಕೊಟ್ಟಿಲ್ಲ. ಇದರಿಂದ, ಇದರ ಬಗ್ಗೆ ಪರಿಶೀಲನೆ ಮಾಡಬೇಕಾಗಿದೆ.

ಶ್ರೀ ಯು. ಭೂಪತಿ.—ಬರಗಾಲಕ್ಕೆ ತುತ್ತಾಗಿರುವಂತಹ ಜನರು ಬಹಳ ವರ್ಷಗಳಿಂದ ಹೋರಾಡುತ್ತಿದ್ದಾರೆ. ಕಮ್ಯಾಂಡ್ ಏರಿಯಾದಲ್ಲಿ ಇದು ಸೇರಿಲ್ಲವೆಂದು ಹೇಳಿದ್ದಾರೆ. ಆದರೆ ಅದು ಲೋಕಲೈಸ್ಡ್ ಏರಿಯಾ ಅಲ್ಲ. ಇದರ ಅಡ್ಜೆಸೆಂಟ್ ಏರಿಯಾಗೆ ೮ ಕ್ಯೂಸೆಕ್ಸ್ ನೀರನ್ನು ಕೊಟ್ಟಿದ್ದಾರೆ. ಆದರೆ, ಅವರು ೨ ಕ್ಯೂಸೆಕ್ಸ್ ನೀರನ್ನೂ ಉಪಯೋಗ ಮಾಡುತ್ತಿಲ್ಲ. ಡಿಆರ್‌ಡಿಎಸ್‌ಗೆ ಎಲ್ಲಾ ಪತ್ರ ವ್ಯವಹಾರವನ್ನು ಮಾಡಿದ್ದಾರೆ. ದುಡ್ಡು ಕಟ್ಟಲೂ ತಯಾರಾಗಿದ್ದಾರೆ. ಆದ್ದರಿಂದ, ತಾವು ಲೀಫ್ರವಾಗಿ ಫೈಲನ್ನು ತರಿಸಿಕೊಂಡರೆ ಕೆಲಸವಾಗುತ್ತದೆ.

ಶ್ರೀ ಹೆಚ್.ಡಿ. ದೇವೇಗೌಡ.—ಮಾನ್ಯ ಸದಸ್ಯರು ಹೇಳಿದ ಎಲ್ಲಾ ವಿಷಯಗಳನ್ನು ಗಮನದಲ್ಲಿಟ್ಟು ಕೊಂಡು ತೀರ್ಮಾನ ಮಾಡುತ್ತೇವೆ.

ಕೃಷ್ಣ ಹಾಗೂ ಕಾವೇರಿ ಯೋಜನೆಗಳು

*೪ಶ್ರೀ ಕೆ.ಪೆಚ್. ಪಾಟೀಲ್ (ಗದಗ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷ್ಣ ಮತ್ತು ಕಾವೇರಿ ನದಿಯ ನೀರನ್ನು ಸದುಪಯೋಗಪಡಿಸಿಕೊಳ್ಳಲು ೮ನೇ ಪಂಚವರ್ಷದಲ್ಲಿ ಸರ್ಕಾರದವರು ಈ ಯೋಜನೆಗಳಿಗೆ ನಿಗದಿಪಡಿಸಲು ಉದ್ದೇಶಿಸಿರುವ ಹಣದ ಮೊತ್ತವೆಷ್ಟು ?

ಆ) ಈ ಎರಡು ನದಿ ನೀರಿನ ಯೋಜನೆಗಳು ಪೂರ್ಣವಾಗಲು ಎಷ್ಟು ವೇಕಾಗಿರುವ ಹಣದ ಮೊತ್ತವೆಷ್ಟು?

ಇ) ಇವುಗಳಿಗೆ ಬೇಕಾಗಿರುವ ಒಟ್ಟು ಹಣಕ್ಕೆ ಸರ್ಕಾರದವರು ಜಾಗೃತ ಬ್ಯಾಂಕಿನೊಡನೆ ಸಹಾಯ ಕೋರಿದ್ದಾರೆಯೇ ?

ಈ) ಹಾಗಿದ್ದಲ್ಲಿ ಅವರಿಂದ ಬಂದ ಉತ್ತರವೇನು ?

ಉ) ಸರ್ಕಾರದವರು ಮೇಲ್ಕಂಡ ಯೋಜನೆಗಳಿಗೆ ಬೇಕಾಗುವ ಸಂಪನ್ಮೂಲಗಳ ಬಗ್ಗೆ ಮತ್ತೆ ಯಾರೊಡನೆ ಸಂಪರ್ಕಿಸಿದ್ದಾರೆ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಯೋಜನಾವಾರು ಮೊತ್ತವನ್ನು ಇನ್ನೂ ನಿಗದಿ ಪಡಿಸಬೇಕಾಗಿದೆ.

ಆ) ಹಾಲಿ ಪ್ರಗತಿಯಲ್ಲಿರುವ ಎರಡು ನದಿ ನೀರಿನ ಯೋಜನೆಗಳು ಪೂರ್ಣವಾಗಲು ಸುಮಾರು ಇನ್ನೂ ೨,೨೩೮ ಕೋಟಿ ರೂಪಾಯಿಗಳು ಬೇಕಾಗಬಹುದು.

ಇ) ಕೃಷ್ಣ ಮೇಲ್ದಂಡೆ ಯೋಜನೆಯ ಸದ್ಯದ ಹಂತದ ಅಂದಾಜಿಗೆ ಜಾಗೃತ ಬ್ಯಾಂಕಿನ ಸಹಾಯ ಕೋರಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಈ) ಮೇಲಿನ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಉ) ಕೇಂದ್ರ ಸರ್ಕಾರದೊಡನೆ ಧನ ಸಹಾಯಕ್ಕಾಗಿ ವ್ಯವಹರಿಸಲಾಗಿದೆ.

ಶ್ರೀ ಹೆಚ್. ಡಿ. ದೇವೇಗೌಡ.—ಈಗ ಆನ್ ಗೋಯಿಂಗ್ ಪ್ರಾಜೆಕ್ಟ್ಸ ಏನಿದೆ, ಅದಕ್ಕೆ ೨,೨೩೮ ಕೋಟಿ ರೂ. ಬೇಕಾಗುತ್ತದೆ. ನಮ್ಮ ಟ್ರಿಬ್ಯೂನಲ್ ಅವಾರ್ಡ್ ಪ್ರಕಾರ, ೭೩೪ ಟಿಎಂಸಿಎಫ್‌ಟಿ ನೀರನ್ನು ಉಪಯೋಗಿಸಿಕೊಳ್ಳಬೇಕು. ೭ ನೂರು ಕೋಟಿ ಅಡಿಷನಲ್ಲಾಗಿ ಬೇಕು. ೯೪೦ ಟಿಎಂಸಿ ಎಫ್‌ಟಿ ನೀರು ಓವರ್ ಅಂಡ್ ಎಬೌವ್ ೭೩೪ ಟಿಎಂಸಿಎಫ್‌ಟಿ ಸರ್‌ಪ್ಲಸ್ ವಾಟರ್ ಏನಿದೆ, ಅದನ್ನು ಮುಗಿಸಲು ೩,೮೫೭ ಕೋಟಿ ರೂಪಾಯಿ ಬೇಕಾಗುತ್ತದೆ. ಕಾವೇರಿ ಬೇಸಿನ್ ಸಿನ್ ಗೋಯಿಂಗ್ ಪ್ರಾಜೆಕ್ಟ್‌ಗೆ ೬೯೫ ಕೋಟಿ ರೂಪಾಯಿ ಬ್ಯಾಲೆನ್ಸ್ ಅಮೌಂಟ್ ಬೇಕಾಗಿರುತ್ತದೆ. ನಮ್ಮ ಲೆಕ್ಕಾಚಾರ, ಇನ್ನೂ ೪೪೦ ಟಿಎಂಸಿಎಫ್‌ಟಿಗೆ ಇನ್ನು ೪ ಮೂರು ಕೋಟಿ ರೂಪಾಯಿ ಬೇಕಾಗುತ್ತದೆ.

ಶ್ರೀ ಕೆ. ಹೆಚ್. ಪಾಟೀಲ್.—ತಾವು ಹೇಳಿದಂತೆ, ೩ ಸಾವಿರ ಕೋಟಿ ರೂಪಾಯಿ ಈ ಯೋಜನೆಗೆ ಬೇಕಾಗುತ್ತದೆ. ಇಂತಹ ದೊಡ್ಡ ಯೋಜನೆ ಇದ್ದರೂ ಸಹ, ಈ ಯೋಜನೆಗಳಿಗೆ ಎಷ್ಟು ಹಣ ನಿಗದಿಪಡಿಸಿದ್ದೀರಿ ? ಯಾವ ಪ್ರಮಾಣದಲ್ಲಿ ನಿಗದಿಪಡಿಸಬೇಕೋ, ಅಷ್ಟು ಪ್ರಮಾಣದಲ್ಲಿ ನಿಗದಿಪಡಿಸಿಲ್ಲ. ಇದರಿಂದ, ಸರ್ಕಾರದವರು ಜನತೆಯ ಹಿತವನ್ನು ಎಷ್ಟರಮಟ್ಟಿಗೆ ಕಾಪಾಡುತ್ತಾರೆ ಎಂಬುದನ್ನು ಅರ್ಥಮಾಡಿಕೊಳ್ಳಬಹುದು. ಮುಂದೆ ಬರತಕ್ಕ ಬಜೆಟ್ಟಿನಲ್ಲಿ ನೀವು ಹೆಚ್ಚು ಹಣವನ್ನು ಒದಗಿಸದೇ ಹೋದರೆ, ಸರ್ಕಾರ ಬರಿ ಬಾಯಿಮಾತಿನಲ್ಲೇ ಹೇಳುತ್ತಿದೆಯೇ ಹೊರತು ಕೆಲಸ ಮಾಡುವುದಿಲ್ಲ ಎಂಬ ಅಭಿಪ್ರಾಯ ನಮಗೆ ಬರುತ್ತದೆ ಆದ್ದರಿಂದ, ತಾವು ಖಡಿತವಾದ ಉತ್ತರ ಕೊಡಬೇಕು.

ಶ್ರೀ ಹೆಚ್. ಡಿ. ದೇವೇಗೌಡ.—ಶ್ರೀ ಕೆ. ಹೆಚ್. ಪಾಟೀಲ್‌ರವರು ಬಹಳ ಮಹತ್ವವಾದ ಪ್ರಶ್ನೆಯನ್ನು ಎತ್ತಿದ್ದಾರೆ. ಅದಕ್ಕೆ ಅಭಿನಂದನೆಗಳು. ೧೯೮೬-೮೭ರಲ್ಲಿ ಎಷ್ಟು ಹಣ ಕೊಡುತ್ತೀರೆಂದು ಕೇಳಿದ್ದಾರೆ. ಅವರೂ ಮಂತ್ರಿಗಳಾಗಿ ಕೆಲಸ ಮಾಡಿದವರು. ಅವರಿಗೆ ಆಳವಾದ ಅನುಭವವಿದೆ. ೧೯೮೬-೮೭ರ ಬಜೆಟ್ಟನ್ನು ಈ ಸಭೆಯ ಮುಂದೆ ಡಿಸ್‌ಕ್ಲೋಸ್ ಮಾಡಲು ಸಾಧ್ಯವಾಗುತ್ತದೆಯೇ ಎಂಬುದನ್ನು ಅವರು ದಯವಾಡಿ ಹೇಳಬೇಕು.

ಶ್ರೀ ಕೆ. ಹೆಚ್. ಪಾಟೀಲ್.—ಬಜೆಟ್ಟಿನಲ್ಲಿ ನಿಗದಿಮಾಡುವಂತಹ ಹಣವನ್ನು ಡಿಸ್‌ಕ್ಲೋಸ್ ಮಾಡಿ ಎಂದು ನಾವು ಹೇಳುವುದಿಲ್ಲ. ಆದರೆ, ತಾವು ಪಿ. ಡಬ್ಲ್ಯು. ಡಿ. ಮಂತ್ರಿಗಳಾಗಿ ಎಲ್ಲಾ ಕೆಲಸಗಳನ್ನೂ ತ್ವರಿತಗೊಳಿಸಲು ಹೆಚ್ಚು ಹಣವನ್ನು ಇಡಲು ಪ್ರಯತ್ನ ಮಾಡಿದ್ದೀರಾ ?

ಶ್ರೀ ಎಸ್. ಎಸ್. ಕಡಪಟ್ಟಿ.—ತಮ್ಮ ಕಾಲದಲ್ಲಂತೂ ಮುಗಿಸಲು ಆಗಲಿಲ್ಲ. ಶ್ರೀ ದೇವೇಗೌಡರ ಕಾಲದಲ್ಲಾದರೂ ಹೆಚ್ಚು ಹಣವನ್ನು ಒದಗಿಸಿ, ಇದನ್ನು ತ್ವರಿತವಾಗಿ ಮುಗಿಸಬೇಕೆಂದು ಹೇಳುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್.—ನೀವು ಇದನ್ನು ಮುಂಗಿಸಿದ್ದರೆ ಜನ ನಿಮ್ಮನ್ನು ಅಲ್ಲಿ ಕೂರಿಸಿ ತ್ತಿದ್ದರು.

ಶ್ರೀ ಎಸ್. ಎಸ್. ಕಡಪಟ್ಟಿ.—ನಾನು ಶ್ರೀ ಕೆ. ಹೆಚ್. ಪಾಟೀಲ್ ಅವರಲ್ಲಿ ಮನವಿ ಮಾಡಿ ಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್.—ನಾವು ಬಿಟ್ಟಿದ್ದನ್ನು ಮುಗಿಸಲು ನೀವು ಬಂದಿಲ್ಲ, ಆ ಕೆಲಸ ವನ್ನು ಬಿಟ್ಟು ಬೇರೆ ಏನೇನೋ ಮುಗಿಸಲು ಹೋಗಿದ್ದೀರಿ.

ಶ್ರೀ ಹೆಚ್. ಡಿ. ದೇವೇಗೌಡ.—ಬೇರೆ ಕೆಲಸವನ್ನೂ ಮಾಡುತ್ತೇವೆ.

ಶ್ರೀ ಎಸ್. ಎಸ್. ಕಡಪಟ್ಟಿ.—ಮಾನ್ಯ ಕೆ. ಹೆಚ್. ಪಾಟೀಲರು, ನಮ್ಮ ಕಾಲದಲ್ಲಿ ನಾವಂತೂ ಮಾಡಲಿಲ್ಲ. ನೀವಾದರೂ ಮಾಡಲಿ ಎಂದು ಕೇಳುತ್ತಿದ್ದಾರೆ

ಶ್ರೀ ಕೆ. ಹೆಚ್. ಪಾಟೀಲ್.—ನಾವೇ ಎಲ್ಲಾ ಕೆಲಸವನ್ನು ಮುಗಿಸಿದ್ದರೆ, ನಿಮ್ಮನ್ನು ಏಕೆ ಜನ ಅಧಿಕಾರಕ್ಕೆ ಕಳುಹಿಸುತ್ತಿದ್ದರು ? ನಾವು ಎಲ್ಲವನ್ನು ಬರೋಬರಿ ಮಾಡಿದಿದ್ದರೆ ನೀವು ಹೇಗೆ ಅಧಿಕಾರಕ್ಕೆ ಬರುತ್ತಿದ್ದೀರಿ ?

ಶ್ರೀ ಎಸ್. ಎಸ್. ಕಡಪಟ್ಟಿ —ಶ್ರೀ ಕೆ. ಹೆಚ್. ಪಾಟೀಲರ ಆಶಯ ಈಡೇರಿಸಲೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾಡಬೇಕಾದ ಕೆಲಸವನ್ನು ಬಿಟ್ಟು, ಬೇರೆ ಏನೇನೋ ಕೆಲಸ ಗಳನ್ನು ಮುಗಿಸುವುದಕ್ಕೆ ಇವರು ಹೊರಟ್ಟಿದ್ದಾರೆ.

ಶ್ರೀ ಹೆಚ್. ಡಿ. ದೇವೇಗೌಡ.—ದೊಡ್ಡ ಪ್ರಮಾಣದಲ್ಲಿ ನೀರಾವರಿ ಯೋಜನೆಗೆ ಸುಮಾರು ೬ ಸಾವಿರ ಕೋಟಿ ರೂಪಾಯಿಗಳು ಬೇಕಾಗುತ್ತವೆ. ಹೋದವರ್ಷ ೧೪೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಮುಂದಿನ ವರ್ಷ ೧೬೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬಹುದು ಸರ್ಕಾರಕ್ಕೂ ಇದರ ಬಗ್ಗೆ ಅತ್ಯಂತ ಹೆಚ್ಚಿನ ಕಳಕಳಿ ಇದೆ. ಈ ವರ್ಷ ಅಂದರೆ ೧೯೮೬-೮೭ನೇ ಸಾಲಿಗೆ ಸ್ವಲ್ಪ ಹೆಚ್ಚು ಹಣವನ್ನು ಒದಗಿಸಲಿಕ್ಕೆ ಪ್ರಯತ್ನ ಪಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈಗ ಮಾನ್ಯ ಮಂತ್ರಿಗಳು ಹೇಳಿದ ಹಾಗೆ ನೀರಾವರಿ ಯೋಜನೆಗೆ ೬ ಸಾವಿರ ಕೋಟಿ ರೂಪಾಯಿಗಳು ಬೇಕಾಗುತ್ತವೆಂದು ತಿಳಿಸಿದ್ದಾರೆ. ಸರ್ವೇ ಸಾಧಾರಣವಾಗಿ ಕೃಷ್ಣ ಬೇಸಿನ್‌ಗೆ ೪ ಸಾವಿರ ಆಥವಾ ೫ ಸಾವಿರ ಕೋಟಿ ರೂಪಾಯಿಗಳು ಬೇಕಾಗು ತ್ತದೆ, ಕಾವೇರಿ ಬೇಸಿನ್‌ಗೆ ೧ ಸಾವಿರ ಕೋಟಿ ರೂಪಾಯಿ ಬೇಕಾಗುತ್ತದೆ. ಇಷ್ಟು ಹಣವನ್ನು ಇವರು ಬಿಡುಗಡೆ ಮಾಡಿದರೆ ಕೆಲಸಗಳು ಆಗುತ್ತವೆ. ಇಷ್ಟು ಹಣವನ್ನು ನೀವು ಬಿಡುಗಡೆ ಮಾಡು ತ್ತೀರೋ ?

ಶ್ರೀ ಹೆಚ್. ಡಿ. ದೇವೇಗೌಡ.—ಶ್ರಿಮಾನ್ ಖರ್ಗೆಯವರು ಮಂತ್ರಿಯಾಗಿದ್ದಾಗ ಯಾವ ಪ್ರಮಾಣದಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಹಣವನ್ನು ಬಿಡುಗಡೆ ಮಾಡುತ್ತಿದ್ದರೋ ಅದಕ್ಕಿಂತ ಹೆಚ್ಚು ಪ್ರಮಾಣದಲ್ಲಿ ನಾವು ಬಿಡುಗಡೆ ಮಾಡುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈ ಕಡೆ ಪ್ರದೇಶಗಳೆಲ್ಲಾ ಸಹ ಬರಗಾಲಕ್ಕೆ ತುತ್ತಾಗುತ್ತವೆ ಆದರೆ ನಮ್ಮ ಕಡೆಯ ಪ್ರದೇಶಗಳಷ್ಟು ಈ ಕಡೆ ಬರಗಾಲ ಬರುವುದಿಲ್ಲ. ಬಿಜಾಪುರ, ಗುಲ್ಬರ್ಗಾ, ರಾಯಚೂರು, ಜಿಲ್ಲೆಗಳು ಬರಗಾಲಕ್ಕೆ ಪ್ರತಿ ವರ್ಷವೂ ತುತ್ತಾಗುತ್ತಲೇ ಇರುತ್ತವೆ. ಆದ್ದರಿಂದ ನಮ್ಮ ಜಿಲ್ಲೆಗಳಿಗಾದರೂ ಹೆಚ್ಚಿನ ಹಣವನ್ನು ಬಿಡುಗಡೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರೋ?

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಖರ್ಗೆಯವರು ಅಧಿಕಾರದಲ್ಲಿದ್ದಾಗ, ಕಾಮಗಾರಿಗೆ ಎಷ್ಟು ಹಣವನ್ನು ಬಿಡುಗಡೆ ಮಾಡುತ್ತಿದ್ದರೋ ಅದಕ್ಕಿಂತ ಹೆಚ್ಚಿನ ರೀತಿಯಲ್ಲಿ ಕೊಡುತ್ತೇವೆಂದು ಆಶ್ವಾಸನೆ ಕೊಡುತ್ತೇನೆ.